# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 18, ರಾಧಾಕೃಷ್ಣ ದೇವಸ್ಥಾನ.**

**ಸಂಖ್ಯೆ: ಸ.ಅ/ವಾ–18/ಪಿ.ಆರ್/12/2020–21** **ದಿನಾಂಕ:02–03–2021**

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ: ಬಿ12(5)ಪಿ.ಆರ್/35/2020–21 ದಿನಾಂಕ: 21–09–2020. ರವರ ಆದೇಶದಂತೆ ದಿನಾಂಕ: 20–02–2021 ರಂದು ವಾರ್ಡ್ ನಂ:18, ರಾಧಾಕೃಷ್ಣ ದೇವಸ್ಥಾನ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**:: ಸಭೆಗೆ ಹಾಜರಾಗಿದ್ದವರ ವಿವರಗಳು ::**

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಎಸ್.ಬಸವರಾಜು. ಭಾ.ಆ.ಸೇ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ. ಈ.ಈರಣ್ಣ. | ಸದಸ್ಯ ಕಾರ್ಯದರ್ಶಿ ವಾಡ್ ನಂ: 18 |
| 3. | ಶ್ರೀ. ನಾಗರಾಜ. | ಸಹಾಯಕ ಕಂದಾಯ ಅಧಿಕಾರಿ (ಹೆಬ್ಬಾಳ) |
| 4. | ಶ್ರೀ. ವಿವೇಕ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5. | ಶ್ರೀಮತಿ. ಸೌಮ್ಯ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |

ಪ್ರಾರಂಭಿಕವಾಗಿ ಸಭೆಯನ್ನು ಉದ್ದೇಶಿಸಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್‌ನಲ್ಲಿರುವ ನಿವಾಸಿಗಳ ಕ್ಷೇಮಾಬಿವೃದ್ಧಿ ಸಂಘದವರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷರು, ಅಧಿಕಾರಿ ನೌಕರುಗಳು ಮತ್ತು ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಸೇರಿ ಸ್ವ–ಪರಿಚಯ ಮಾಡಿಕೊಳ್ಳಲಾಯಿತು.

ವಾರ್ಡಿನ ಅಧ್ಯಕ್ಷರು ಮಾತನಾಡುತ್ತಾ ವಾರ್ಡಿನಲ್ಲಿ ಅಭಿವೃದ್ಧಿಯಾಗಬೇಕಾಗಿರುವ ಹಾಗೂ 2021–22 ರ ಬಜೆಟ್‌ನಲ್ಲಿ ಅಳವಡಿಸಬೇಕಾದ ಅಂಶಗಳ ಬಗ್ಗೆ ಚರ್ಚಿಸಲಾಯಿತು.

**2021–22 ರ ಬಜೆಟ್‌ನಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು**

1. ಹೆಚ್.ಐ.ಜಿ ಕಾಲೋನಿಯಲ್ಲಿ ಹಾದುಹೋಗುವ ಬೃಹತ್ ಮಳೆನೀರು ಗಾಲುವೆಗಳ ನಿರ್ವಹಣೆ, ತಡೆಗೋಡೆಗಳನ್ನು ಎತ್ತರಿಸುವುದು ಹಾಗೂ ರೈಲ್ವೇ ಕೆಳಸೇತುವೆ ಮತ್ತು ಹೊರವರ್ತುಲ ರಸ್ತೆಯ ಸೇತುವೆ ಅಗಲೀಕರಣಗೊಳಿಸಲು ಅನುದಾನವನ್ನು ಒದಗಿಸುವುದು.
2. ಜಲದರ್ಶಿನಿ ಬಡಾವಣೆಯಲ್ಲಿ ಹಾದುಹೋಗುವ ಮಳೆನೀರು ಗಾಲುವೆಯ ಪುನರ್ ನವೀಕರಣಕ್ಕೆ ರೂ: 3.00 ಕೋಟಿ ಅನುದಾನವನ್ನು ಒದಗಿಸುವುದು.
3. ವಾರ್ಡ್‌ನಲ್ಲಿ ಬರುವ ಸಿ.ಸಿ ಕ್ಯಾಮೇರಾಗಳ ನಿರ್ವಹಣೆಗೆ ಅನುದಾನವನ್ನು ಒದಗಿಸುವುದು.
4. ವಾರ್ಡ್‌ನಲ್ಲಿ ಹೆಚ್ಚುವರಿ ಕಂಬಗಳು ಮತ್ತು ಬೀದಿ ದೀಪಗಳನ್ನು ಅಳವಡಿಸಲು ರೂ: 50.00 ಲಕ್ಷಗಳ ಅನುದಾನವನ್ನು ಒದಗಿಸುವುದು.
5. ವಾರ್ಡ್‌ನಲ್ಲಿ ಬರುವ ವೆಂಕಟಾಚಾರಿ ನಗರದ ಮುಖ್ಯರಸ್ತೆಯಲ್ಲಿ ಭಾರಿ ವಾಹನಗಳನ್ನು ತಡೆಗಟ್ಟಲು ಬ್ಯಾರಿಕೇಡ್ ಅನ್ನು ಅಳವಡಿಸುವ ಕುರಿತು.

6. ಪಟೇಲಪ್ಪ ಬಡಾವಣೆಯ ರೈಲ್ವೇ ಕೆಳ ಸೇತುವೆಗೆ ಮಳೆನೀರನ್ನು ಕೊಂಡೊಯ್ಯುವ ಡ್ರೈನ್ ಅಭಿವೃದ್ಧಿ ಪಡಿಸಲು ಅನುದಾನವನ್ನು ಒದಗಿಸುವುದು.

**ಸಭೆಯಲ್ಲಿ ಚರ್ಚಿಸಲಾದ ಇನ್ನಿತರೆ ವಿಷಯಗಳು**

7. ವಿದ್ಯುತ್ ಕಂಬಗಳಿಗೆ ಒಂದು ವಾರದೊಳಗೆ ಟೈಮರ್‌ಗಳನ್ನು ಅಳವಡಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ತಿಳಿಸಲಾಯಿತು.
8. ವೆಂಕಟಾಚಾರಿ ನಗರದಲ್ಲಿ ದಿನನಿತ್ಯ ಘನತ್ಯಾಜ್ಯವನ್ನು ತೆರವುಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
9. ಫೆಬ್ರವರಿ ತಿಂಗಳೊಳಗೆ 45 ಮನೆಗಳಿಗೆ ಸಂಪರ್ಕಗಳನ್ನು ಕಲ್ಪಿಸಲು Gail ಸಂಸ್ಥೆಯವರಿಗೆ ಸೂಚಿಸಲಾಯಿತು.
10. ಕುವೆಂಪು ಮೈದಾನದಲ್ಲಿ 3 ದಿನಗಳ ಒಳಗಾಗಿ ಬೀದಿ ದೀಪವನ್ನು ಅಳವಡಿಸಲು ಕಿರಿಯ ಅಭಿಯಂತರರು (ವಿದ್ಯುತ್) ರವರಿಗೆ ತಿಳಿಸಲಾಯಿತು.
11. ಕುವೆಂಪು ವೃತ್ತದಿಂದ ಗೋಲ್ಡ್‌ಜಿಮ್ ವರೆಗೆ ಬೀದಿ ದೀಪಗಳನ್ನು ದುರಸ್ಥಿ ಪಡಿಸಲು ವಿದ್ಯುತ್ ಗುತ್ತಿಗೆದಾರರಿಗೆ ಸೂಚಿಸಲಾಯಿತು.
12. ಜ್ಯುಡಿಷಿಯಲ್ ಬಡಾವಣೆಯಲ್ಲಿ ಉದ್ಯಾನವನದ ಕಾಮಗಾರಿಯ ವೇಗವನ್ನು ಹೆಚ್ಚಿಸಿ ಪೂರ್ಣಗೊಳಿಸಲು ಯೋಜನಾ ವಿಭಾಗದ ಅಭಿಯಂತರರಿಗೆ ತಿಳಿಸಲು ವಾರ್ಡ್‌ನ ಅಭಿಯಂತರರಿಗೆ ಸೂಚಿಸಲಾಯಿತು.
13. ಬೀದಿ ಬದಿ ವ್ಯಾಪಾರಿಗಳ ಸಭೆಯನ್ನು ಮಾರ್ಚ್ ಎರಡನೇ ವಾರದಲ್ಲಿ ಏರ್ಪಡಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲು ವಾರ್ಡ್‌ನ ಅಭಿಯಂತರರಿಗೆ ಸೂಚಿಸಲಾಯಿತು.
14. ಹೆಚ್.ಐ.ಜಿ ಕಾಲೋನಿಯ ಮೊದಲನೇ ಮುಖ್ಯರಸ್ತೆಯಲ್ಲಿ ಸ್ಥಗಿತಗೊಂಡಿರುವ ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ತಿಳಿಸುವಂತೆ ವಾರ್ಡ್‌ನ ಅಭಿಯಂತರರಿಗೆ ಸೂಚಿಸಲಾಯಿತು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 18 ರಾದಾಕೃಷ್ಣ ದೇವಸ್ಥಾನ

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು (ಪೂರ್ವ) ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
3. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.